**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,</u>**
**<u>ಬದಾಮಿ ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ ರವರ ನ್ಯಾಯಾಲಯದಲ್ಲಿ.</u>**

<u>ಸಿಸಿ ನಂ.**83/2020**</u>

1. ಕರ್ನಾಟಕ ಸರ್ಕಾರದ ಪರವಾಗಿ ಗುಳೇದಗುಡ್ಡ ಠಾಣಾ ಪೋಲಿಸರು

**...ಪಿರ್ಯಾದಿದಾರರು**

**ವಿರುದ್ಧ**

1) ಶಿವಕುಮಾರ ತಾಯಿ ಯಲ್ಲವ್ವ ಚಿಮ್ಮಲ ಹಾಗೂ ಇತರರು
ವಯಾಃ ವರ್ಷ
2) ಶ್ರೀ ರಾಘವೇಂದ್ರ ತಾಯಿ ಯಲ್ಲವ್ವ ಚಿಮ್ಮಲ
ವಯಾಃ ವರ್ಷ
3) ಶ್ರೀ ಮಂಜುನಾಥ ತಾಯಿ ಯಲ್ಲವ್ವ ಚಿಮ್ಮಲ
ವಯಾಃ ವರ್ಷ
6) ಶ್ರೀಮತಿ ಶಿಲ್ಪಾ ತಾಯಿ ಯಲ್ಲವ್ವ ಚಿಮ್ಮಲ
ವಯಾಃ ವರ್ಷ
ಎಲ್ಲರೂ ಸಾಃ ಹಂಸನೂರು, ತಾಃ ಬಾದಾಮಿ, ಜಿಃ ಬಾಗಲಕೋಟೆ
ಸಾಃ ಹಂಸನೂರ, ತಾಃ ಬಾದಾಮಿ,
ಜಿಃ ಬಾಗಲಕೋಟೆ.

**...ಆರೋಪಿತರು**

**<u>:: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತನ ಹೇಳಿಕೆ ::</u>**

ಪ್ರಶ್ನೆ-1: ಈ ಪ್ರಕರಣದಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದಿರಾ?

ಉತ್ತರ:

ಪ್ರಶ್ನೆಃ 2 ಪ್ರಾಸಾ-1 ಪರಶುರಾಮ ಯಲ್ಲುಬಾಯಿ ಚಿಮ್ಮಲ ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಆರೋಪಿತರಾದ ನಿಮ್ಮ ಮತ್ತು ಚಾಸಾ-1 ರವರ ನಡುವೆ ಮನೆಯ ಜಾಗೆಯ ವಿಷಯದಲ್ಲಿ ಜಗಳವಿದ್ದು ಹೀಗಿರುವಾಗ ದಿನಾಂಕಃ 13-04-2012 ರಂದು ರಾತ್ರಿ 9-00 ಗಂಟೆಯ ಸುಮಾರಿಗೆ ಪರಶುರಾಮ ಯಲ್ಲುಬಾಯಿ ಚಿಮ್ಮಲ ಇವರು ಲಗ್ನದ ಪತ್ರಿಕೆಗಳನ್ನು ಹಂಚಿ ಅವರ ಮನೆಯ ಹತ್ತಿರ ಬರುವಾಗ 1 ನೇ ಆರೋಪಿತನಾದ ನೀನು ಸೈಕಲ್ ಚೈನ್‌ನಿಂದ ಅವರ ತಲೆಗೆ ಹೊಡೆದಿದ್ದು ಅದರಿಂದ ಅವರ ತಲೆಗೆ ಮತ್ತು ಎಡಗಣ್ಣಿಗೆ ಪೆಟ್ಟಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ

-3 ಪ್ರಶ್ನೆ-3: ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-6 ಅನಿಲಕುಮಾರ ಚಿಮ್ಮಲ್ ಇವರಿಗೆ ಬಡಿಗೆಯಿಂದ ಹೊಡೆದಿದ್ದು ಅದರಿಂದ ಆತನಿಗೆ ರಕ್ತ ಗಾಯ ಆಗಿರುತ್ತದೆ. 6 ನೇ ಆರೋಪಿತನಾದ ನೀನು ಚಾಸಾ-8 ಸುನಂದಾ ಚಿಮ್ಮಲ

ಇವರಿಗೆ ಹೊಡೆದು ಗಲಾಟೆ ಮಾಡಿರುತ್ತಾರೆ ಮತ್ತು ಮೃತ 4 ನೇ ಆರೋಪಿ ಕಲ್ಲಿನಿಂದ ಹೊಡೆದು ಗಾಯ ಪಡಿಸಿ ಮತ್ತು ಪರಶುರಾಮ ಯಲ್ಲುಬಾಯಿ ಚಿಮ್ಮಲ ಇವರಿಗೆ ಜನ ಬಿಡಿಸಿದ್ದಾರೆ ಇನ್ನೊಂದು ಸಲ ಸಿಕ್ಕಿರಿ ಕೊಲೆ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ

-3 ಪ್ರಶ್ನೆ-4: ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಅವರು ಮೊದಲು ಗುಳೇದಗುಡ್ಡದ ಆಸ್ಪತ್ರೆಗೆ ಹೋಗಿ ನಂತರ ಅಲ್ಲಿಂದ ಬಾಗಲಕೋಟೆಯ ಕೆರೂಡಿಗೆ ಆಸ್ಪತ್ರೆಗೆ ದಾಖಲಾಗಿ ನಂತರ ಸದರಿ ಜಗಳದ ವಿಷಯದ ಕುರಿತು ಚಾಸಾ-1 ರವರಿಗೆ ಕೈಗೆ ಪೆಟ್ಟಾಗಿದ್ದ ಕಾರಣ ಚಾಸಾ-7 ರವರ ಮುಖಾಂತರ ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

-3 ಪ್ರಶ್ನೆ-5: ಪ್ರಾಸಾ-4 ಅನಿಲಕುಮಾರ ಚಿಮ್ಮಲರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 13.04.2012 ರಂದು ಆರೋಪಿತರೆಲ್ಲರು ಆಟೋದಲ್ಲಿ ಬಂದು, 1 ನೇ ಆರೋಪಿಯಾದ ನೀನು ಚಾಸಾ-1 ರವರಿಗೆ ಸೈಕಲ ಚೈನಿನಿಂದ ಹೊಡೆದು ಅದರಿಂದ ಅವರ ಬಲಗಿವಿ ಹರಿದು ರಕ್ತ ಬಂದಿತು. 2 ಮತ್ತು 3 ನೇ ಆರೋಪಿತರಾದ ನೀವು ಬಡಿಗೆಯಿಂದ ಅವರ ಮುಂಗೈಗೆ ಮತ್ತು ಪಕ್ಕಡಿಗೆ ಹೊಡೆದಿರುತ್ತೀರಿ. 6 ನೇ ಆರೋಪಿ ಹಾಗೂ ಮೃತ 4 ನೇ ಆರೋಪಿತರಾದ ನೀವು ಅನಿಲಕುಮಾರ ಚಿಮ್ಮಲ ಇವರ ಹೆಂಡತಿಗೆ ಎಳೆದಾಡಿರುತ್ತೀರಿ ನಂತರ ನೀವೆಲ್ಲರು ಹೋಗಬೇಕಾದರೆ ಇವತ್ತು ಜನ ಜಗಳ ಬಿಡಿಸಿದ್ದಾರೆ ಇಲ್ಲವಾದರೆ ಜೀವ ತೆಗೆಯುತ್ತೇವೆ ಬೋಸಡಿ ಮಕ್ಕಳೇ ಎಂದು ಅವಾಚ್ಯವಾಗಿ ಬೈಯ್ದು ಜೀವ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-6ಃ ಪ್ರಾಸಾ-4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸದರಿ ಜಗಳದಿಂದ ಗಾಯಗಳಾಗಿದ್ದು ಅವರನ್ನು ಗುಳೇದಗುಡ್ಡ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಮತ್ತು ಚಾಸಾ-1 ರವರನ್ನು ಜಿಲ್ಲಾ ಆಸ್ಪತ್ರೆಗೆ

ಚಿಕಿತ್ಸೆಗೆ ದಾಖಲಿಸಿರುತ್ತಾರೆ ಮತ್ತು ಈ ಕುರಿತು ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-7ಃ ಪ್ರಾಸಾ-5 ಕಾಂತರಾಜ ಬಿ.ಎನ್.ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 13.04.2012 ರಂದು ರಾತ್ರಿ 11.15 ಗಂಟೆ ಸುಮಾರಿಗೆ ಗುಳೇದಗುಡ್ಡ ಠಾಣೆಯ ಎಚ್.ಸಿ. ನಂ.497 ಇವರು ಗಾಯಾಳುಗಳಾದ ಪರಶುರಾಮ, ಅನಿಲಕುಮಾರ ಮತ್ತು ಸುನಂದಾ ಇವರನ್ನು ಚಿಕಿತ್ಸೆಗೆ ಹೊಡೆದಾಟದ ಹಿನ್ನೆಲೆಯಲ್ಲಿ ಕರೆದುಕೊಂಡು ಬಂದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-8ಃ ಪ್ರಾಸಾ-5 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಗಾಯಾಳು ಪರಶುರಾಮ ಚಿಮ್ಮಲ ಈತನನ್ನು ಪರಿಕ್ಷಿಸಿದಾಗ ಎಡ ಹುಬ್ಬಿನ ಮೇಲೆ 3X3X2 ಸೆ.ಮೀ. ಅಳತೆಯ ಊತವುಳ್ಳ ಹರಿದ ಗಾಯ, ಎಡ ಕಣ್ಣಿನ ಕೆಳಗೆ ಊತವುಳ್ಳ ಹರಿದ ಗಾಯ ರಕ್ತ ಸೋರುತ್ತಿತ್ತು, ಬಲಕಿವಿಯ ಒಳಕಿವಿ ಸಣ್ಣಭಾಗ ಹರಿದಿತ್ತು ಸದರಿ ಎಲ್ಲ ಗಾಯಗಳು ಭಾರಿ ಸ್ವರೂಪದ ಗಾಯಗಳಾಗಿದ್ದು ಈ ಕುರಿತು ನಿ.ಪಿ.6 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ

ಪ್ರಶ್ನೆ-9ಃ ಪ್ರಾಸಾ-5 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಗಾಯಾಳು ಅನಿಲಕುಮಾರ ಚಿಮ್ಮಲ ಈತನನ್ನು ಪರಿಕ್ಷಿಸಿದಾಗ ಆತನ ಎರಡೂ ಮುಂಗೈಯಲ್ಲಿ ತೆರಚಿದ ಗಾಯ ಮತ್ತು ಮೊಣಕಾಲಿನಲ್ಲಿ ತೆರಚಿದ ಗಾಯ ಕಂಡುಬಂದಿದ್ದು ಸದರಿ ಸಾದಾ ಸ್ವರೂಪದ ಗಾಯಗಳಾಗಿದ್ದು ಈ ಕುರಿತು ನಿ.ಪಿ.7 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-10ಃ ಪ್ರಾಸಾ-5 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಗಾಯಾಳು ಸುನಂದ ಚಿಮ್ಮಲ ಇವರನ್ನು ಪರಿಕ್ಷಿಸಿದಾಗ ಅವರಿಗೆ ಯಾವುದೇ ಹೊರಗಾಯಗಳು ಕಂಡುಬಂದಿರುವುದಿಲ್ಲ. ಆಕೆ ಆರು ತಿಂಗಳು ಗರ್ಭಿಣಿ

ಇದ್ದುದು ಕಂಡು ಬಂದಿತು. ಆಕೆ ಮೈ ಕೈ ನೋವು ಇದ್ದ ಬಗ್ಗೆ ಹೇಳಿದ್ದು ಈ ಕುರಿತು ನಿ.ಪಿ.8 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-11ಃ ಪ್ರಾಸಾ-6 ಸುನಂದಾ ಚಿಮ್ಮಲರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕಃ 13-04-2012 ರಂದು ರಾತ್ರಿ 9 ಗಂಟೆಯ ಸುಮಾರಿಗೆ ಚಾಸಾ-1 ಮತ್ತು 6 ರವರು ಮದುವೆ ಲಗ್ನ ಪತ್ರ ಕೊಡಲು ಹೋಗಿ ವಾಪಸ ಮನೆಗೆ ಬರಬೇಕಾದರೆ 1 ನೇ ಆರೋಪಿ ಚಾಸಾ-1 ರವರಿಗೆ ಸೈಕಲ ಚೈನಿನಿಂದ ಬಲ ಕಿವಿಗೆ ಮತ್ತು ಎಡಗಣ್ಣಿಗೆ ಹೊಡೆದರು. ಜಾಗೆ ನಿಮ್ಮದ ನಿಮ್ಮ ಅಪ್ಪನದಾ ಎಂದು ಬೈದರು. 3 ಮತ್ತು 4 ನೇ ಆರೋಪಿತರು ಚಾಸಾ6 ರವರಿಗೆ ಚೈನ ತೆಗೆದುಕೊಂಡು ಬೆನ್ನಿಗೆ ಮತ್ತು ಮೊಣಕಾಲಿಗೆ ಮತ್ತು ಬಲಗೈಗೆ ಹೊಡೆದಿದ್ದು ಅದರಿಂದಾಗಿ ಅವರ ಮೊಣಕೈಗೆ ಮತ್ತು ಪಕ್ಕಡಿಗೆ ಗಾಯವಾಗಿ ರಕ್ತ ಬಂದಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-12ಃ ಪ್ರಾಸಾ-6 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, 2, 5 ಮತ್ತು 6 ಆರೋಪಿತರಾದ ನೀವು ಅವರನ್ನು ಹಿಡಿದು ಜಗ್ಗಾಡಿದರು ಅದರಿಂದ ಅವರಿಗೆ ಅವಮಾನವಾಗಿದ್ದು, ಜನ ಬಂದಿದ್ದಾರೆಂದು ಬಿಟ್ಟಿದ್ದೇವೆ ಇಲ್ಲದಿದ್ದರೆ ಜೀವ ತೆಗೆಯುತ್ತಿದ್ದೆವು ಎಂದು ಅವಾಚ್ಯ ಶಬ್ದಗಳಿಂದ ಬೈಯ್ದಾಡಿ ಜೀವದ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ

ಪ್ರಶ್ನೆ-13 ಪ್ರಾಸಾ-7 ವೆಂಕಟೇಶ ಚಿಮ್ಮಲರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 13-04-2012 ರಂದು ರಾತ್ರಿ 9 ಗಂಟೆಯ ಸುಮಾರಿಗೆ ಆಟೋ ನಂ. ಕೆಎ-29/ಎ-4996 ನೇದ್ದರಲ್ಲಿ ಬಂದು 1 ನೇ ಆರೋಪಿ ಚಾಸಾ-1 ಇವನ ಎಡಗಣ್ಣಿನ ಹತ್ತಿರ, ತಲೆಗೆ ಮತ್ತು ಬಲ ಕಿವಿಯ ಹತ್ತಿರ ಸೈಕಲ ಚೈನಿನಿಂದ ಹೊಡೆದು ಗಾಯ ಪಡಿಸಿದನು. 2 ಮತ್ತು 3 ನೇ ಆರೋಪಿತರು ಚಾಸಾ-6 ಇವನಿಗೆ ಕಟ್ಟಿಗೆಯಿಂದ ಮುಂಗೈಗೆ ಮತ್ತು ಮೊಣಕಾಲಿಗೆ ಹೊಡೆದರು. ಮೃತ 4 ಮತ್ತು 5 ನೇ ಆರೋಪಿ ಮತ್ತು 6 ನೇ ಆರೋಪಿ ಸೇರಿ ಚಾಸಾ-8 ಇವಳಿಗೆ ಅವಾಚ್ಯವಾಗಿ ಬೈದಾಡಿ ಜೆಗ್ಗಾಡಿ ಕೈಯಿಂದ ಮತ್ತು ಕಟ್ಟಿಗೆಯಿಂದ ಪಕ್ಕಡಿಗೆ ಮತ್ತು

ಹೊಟ್ಟೆಗೆ ಹೊಡೆದರು ಮತ್ತು ಎಲ್ಲರೂ ಸೇರಿ ಇನ್ನೊಂದು ಸಲ ಸಿಕ್ಕರೆ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-14ಃ ಪ್ರಾಸಾ-8 ಮಾರುತಿ ಪೂಜಾರರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 15.04.2012 ರಂದು ಆರೋಪಿತರ ಮನೆಯ ಮುಂದೆ 9 ರಿಂದ 10 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯಲ್ಲಿ ಎರಡು ಬಡಿಗೆ, ನಾಲ್ಕು ಕಲ್ಲು ಮತ್ತು ಚೈನನ್ನು ಜಪ್ತಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-15 ಪ್ರಾಸಾ-9 ಅಡಿವೆಪ್ಪ ಪೂಜಾರರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಆರೋಪಿತರ ಹಾಗೂ ಪಿರ್ಯಾದಿ ನಡುವೆ ಮನೆಯ ಜಾಗೆಯ ಕುರಿತು ಜಗಳ ಆಗಿದ್ದು ಸದರಿ ಜಗಳವನ್ನು ಅವರು ಮತ್ತು ಚಾಸಾ-9, 11 ರವರು ಬಿಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-16 ಪ್ರಾಸಾ-11 ಮಹಾದೇವಪ್ಪ ನೀಲಗಾರರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 14.04.2012 ರಂದು ಸಾಯಂಕಾಲ 5.00 ಗಂಟೆಗೆ ಚಾಸಾ-1 ರವರಿಂದ ಬಾಗಲಕೋಟೆ ಕೆರೂಡಿ ಆಸ್ಪತ್ರೆಯಲ್ಲಿ ದೂರನ್ನು ಪಡೆದುಕೊಂಡಿದ್ದು ಸದರಿ ದೂರಿನ ಆಧಾರದ ಮೇಲೆ ನಿ.ಪಿ.13 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನಂತರ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-15 ರವರಿಗೆ ವಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-17 ಪ್ರಾಸಾ-12 ಗೆದ್ದಪ್ಪ ಹಣಮಪ್ಪ ಬಡಿಗೇರರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 15-04-2012 ರಂದು ಚಾಸಾ-14 ರವರಿಂದ ಮುಂದಿನ ತನಿಖೆಯನ್ನು ಪಡೆದುಕೊಂಡು ಪರಿಶೀಲಿಸಿ ಗುನ್ನೆ ಜಾಗೆಗೆ ಹೋಗಿ ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ನೆ ಜಾಗೆಯನ್ನು ಪಂಚನಾಮೆ ಮಾಡಿ ಸುಮಾರು 5 ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ನಂತರ ಚಾಸಾ-6

ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 04.06.2012 ರಂದು ಚಾಸಾ-4 ಮತ್ತು 5 ರವರ ಸಮಕ್ಷಮ ಟಂಟಂ ವಾಹನವನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ ಮತ್ತು ಅದೆ ದಿನ ಎಲ್ಲ ಸಾಕ್ಷಿದಾರರ ಪುನ: ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-18 ಪ್ರಾಸಾ-12 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕ 14.06.2012 ರಂದು ನ್ಯಾಯಾಲಯದ ಆದೇಶದ ಮೇರೆಗೆ ಟಂಟಂ ವಾಹನವನ್ನು ಬಿಡುಗಡೆಗೊಳಿಸಿರುತ್ತಾರೆ. ದಿನಾಂಕ 21.05.2012 ರಂದು ಚಾಸಾ-1, 6 ಮತ್ತು 8 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 30.06.2012 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ನಂತರ ಆರೋಪಿತರಾದ ನಿಮ್ಮ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-19: ಈ ಪ್ರಕರಣದಲ್ಲಿ ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ ?

ಉತ್ತರ:

ಪ್ರಶ್ನೆ-20: ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುತ್ತೀರಾ?

ಉತ್ತರ:

(ಆರೋಪಿತರಿಗೆ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಇಂದು ನಮ್ಮ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಅವರು ಕೊಟ್ಟ ಉತ್ತರಗಳನ್ನು ನಮೂದಿಸಿಕೊಳ್ಳಲಾಯಿತು)

ದಿನಾಂಕಃ 06-10-2025
ಸ್ಥಳಃ ಗುಳೇದಗುಡ್ಡ

HARISH JADHAV
Digitally signed by HARISH JADHAV
Date: 2025.10.09 17:53:34 +0530

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.,
ಬದಾಮಿ, ಸಂಚಾರಿ ನ್ಯಾಯಾಲಯ ಗುಳೇದಗುಡ್ಡ.